ದಿನಾಂಕಃ **22.07.2024** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

DW-1 ರವರ ಪಾಟೀಸವಾಲು ವಾದಿ ಪರ ಶ್ರೀ ಎಂ.ಬಿ.ಜಿ. ವಕೀಲರಿಂದ

ವಾದಿಗಳಿಗೂ ಹಾಗೂ ನನಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿ. ದಾವಾ ಸ್ವತ್ತು ಪಾಲುಪಟ್ಟಿಯ ಮುಖಾಂತರ ನನ್ನ ತಂದೆಗೆ ಬಂದು ನಂತರ ನನಗೆ ಬಂದಿರುತ್ತದೆ. ಎಂ.ಆರ್.ಸಂಖ್ಯೆಃ 20/84-85 ರ ಪೂರ್ವದಲ್ಲಿ ಚಿಕ್ಕಚನ್ನೇಗೌಡರವರ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ಸದರಿ ಚಿಕ್ಕಚನ್ನೇಗೌಡರವರು ಒಪ್ಪಿಗೆ ನೀಡದೇ ಇದ್ದರೂ ಸಹ ನಿಮ್ಮ ಹೆಸರಿನಲ್ಲಿ ಖಾತೆಯಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮೂಲತಃ ಕೆಂಪೇಗೌಡರ ಪತ್ನಿ ಮರಿಚನ್ನಮ್ಮ ಉಃ ಚಿಕ್ಕತಾಯಮ್ಮನವರ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ಲಿಂಗೇಗೌಡ ಎಂಬುವವರು ದಿನಾಂಕಃ 10.10.1939 ರಂದು ಮರಿಚನ್ನಮ್ಮ ಉಃ ಚಿಕ್ಕತಾಯಮ್ಮನವರಿಂದ ಖರೀದಿ ಮಾಡಿರುತ್ತಾರೆಂದರೆ ಸರಿಯಲ್ಲ. ಸದರಿ ಕ್ರಯದ ಪ್ರಕಾರ ಲಿಂಗೇಗೌಡರ ಹೆಸರಿನಲ್ಲಿ ಖಾತೆ ಬದಲಾವಣೆಯಾಗಿರುತ್ತದೆ ಎಂದರೆ ಸರಿಯಲ್ಲ.

ದಿನಾಂಕಃ 09.10.1984 ರಂದು ದಾವಾ ಸ್ವತ್ತು ವಿಭಾಗ ಪತ್ರದ ಮುಖಾಂತರ ವಾದಿ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಖಾತೆಯು 1984 ರ ಪೂರ್ವದಲ್ಲಿ ನನ್ನ ತಾತನ ಹೆಸರಿನಲ್ಲಿತ್ತು. ನನ್ನ ತಾತನ ಹೆಸರು ಗೆಂಡೇಗೌಡ. ನನ್ನ ತಾತನ ಹೆಸರಿನಲ್ಲಿ ಖಾತೆ ಇರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ನೀಡಿರುತ್ತೇನೆ. ಎಂ.ಆರ್.ಸಂಖ್ಯೆಃ 20/84-85 ರಂತೆ ಮೋಸದಿಂದ ಖಾತೆ ಮಾಡಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ. ಸದರಿ ದಾವಾ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತಿದ್ದೀಯಾ ಎಂದರೆ ಸರಿಯಲ್ಲ.

ಮರಿಲಿಂಗೇಗೌಡ ಉಃ ಗೆಂಡೇಗೌಡ ಎಂದರೆ ನಮ್ಮ ತಾತ. ಲಿಂಗೇಗೌಡರವರನ್ನು ಮರಿಲಿಂಗೇಗೌಡ ಎಂದು ಕರೆಯುತ್ತಿದ್ದರು ಎಂದರೆ ಸರಿಯಲ್ಲ. ವಿಭಾಗ ಪತ್ರದ ಮೂಲಕ ಚಿಕ್ಕಚನ್ನೇಗೌಡರವರಿಗೆ ದಾವಾ ಸ್ವತ್ತು ಅವರ ಹೆಸರಿಗೆ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತಿದ್ದೀಯಾ ಎಂದರೆ ಸರಿಯಲ್ಲ.

1 ನೇ ವಾದಿಯ ಗಂಡ 2 ಮತ್ತು 3 ನೇ ವಾದಿಯ ತಂದೆಯಾದ ಚಿಕ್ಕಚನ್ನೇಗೌಡ ರವರು ಪಿಎಲ್ ಡಿ ಬ್ಯಾಂಕ್ ನಲ್ಲಿ ಸಾಲ ಪಡೆದುಕೊಂಡು ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ದಿನಾಂಕ04.11.2019 ರಲ್ಲಿ ಚಿಕ್ಕಚನ್ನೇಗೌಡ ಮೃತಪಟ್ಟಿರುತ್ತಾರೆಂದರೆ ಸರಿ. ದಾವಾ ಸ್ವತ್ತಿನಲ್ಲಿ ಚಿಕ್ಕಚನ್ನೇಗೌಡರು ಮೃತ ಪಟ್ಟ ನಂತರ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನೀವು ದಾವಾ ಸ್ವತ್ತಿನ ಮಾಲೀಕರೂ ಅಲ್ಲ ಸ್ವಾಧೀನಾನುಭವವನ್ನು ಸಹ ಹೊಂದಿರುವುದಿಲ್ಲ ಆದರೂ ಸಹ ವಾದಿಗಳಿಗೆ ತೊಂದರೆಯನ್ನು ನೀಡುವ ಉದ್ದೇಶದಿಂದ ಅಕ್ರಮವಾಗಿ ಖಾತೆಯನ್ನು ಮಾಡಿಕೊಂಡಿರುತ್ತೀರಾ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೂ ನಿಮಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಸಾ.ಓ.ಹೇ.ಸ. ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಪಾಂಡವಪುರ